ಕರ್ನಾಟಕ ಸರ್ಕಾರ

ಸಂ:ಟಿಟಿಇ/07/ಇಎಫ್‌ಎಸ್-2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆರಸ್ತೆ, ಬೆಂಗಳೂರು,
ದಿನಾಂಕ:29-06-2017.

**ಸುತ್ತೋಲೆ**

ವಿಷಯ:- ತಾಂತ್ರಿಕ ಪರೀಕ್ಷಾ ಮಂಡಳಿಯಲ್ಲಿ ಲಭ್ಯವಿರುವ ಹೆಚ್ಚುವರಿ ಉತ್ತರಪತ್ರಿಕೆ (Additional Answer Booklet) ಗಳನ್ನು ಪ್ರಾಯೋಗಿಕ ಪರೀಕ್ಷೆಗೆ ಅಥವಾ ಕಛೇರಿ ಕೆಲಸಗಳಿಗೆ ಬಳಸುವ ಬಗ್ಗೆ.

ಉಲ್ಲೇಖ:- ತಾಂತ್ರಿಕ ಪರೀಕ್ಷಾ ಮಂಡಳಿಯ 2016 ನೇ ನವಂಬರ್/ಡಿಸೆಂಬರ್ ಪರೀಕ್ಷೆಯ ಇ- ಹರಾಜು ಸಭೆಯ ಪ್ರೀ-ಬಿಡ್ ಸಭೆಯ ನಿರ್ಣಯ ದಿ:10.05.2017.

@@@@@@

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯ 2016 ರ ನವೆಂಬರ್/ಡಿಸೆಂಬರ್ ಡಿಪ್ಲೋಮೊ ಪರೀಕ್ಷೆಗಳ ಮೌಲ್ಯಮಾಪನಗೊಂಡ ಹಳೆಯ ಥಿಯರಿ ಮತ್ತು ಪ್ರಾಯೋಗಿಕ ಉತ್ತರ ಪತ್ರಿಕೆಗಳು, ಡ್ರಾಯಿಂಗ್ ಹಾಳೆಗಳು ಹಾಗೂ ಹಳೆಯ ಇತರೆ ಲಕೋಟೆಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲು (pulp) ಇ-ಹರಾಜಿಗಾಗಿ ಪ್ರಿ-ಇ-ಹರಾಜು ಸಭೆಯ ದಿನಾಂಕ: 10-05-2017 ರಂದು ತಾಂತ್ರಿಕ ಪರೀಕ್ಷಾ ಉಗ್ರಾಣ ವಿಭಾಗದ ಆರ್.ಆರ್. ಸಂಖ್ಯೆ:242, ವಹಿ ಸಂಖ್ಯೆ:57, ಪುಟ ಸಂಖ್ಯೆ:89 ರಲ್ಲಿ ದಿ:03.10.2013 ರಂದು ದಾಸ್ತಾನು ತೆಗೆದುಕೊಂಡಿರುವ 89,000(ಎಂಬತ್ತೊಂಬತ್ತು ಸಾವಿರ ಮಾತ್ರ) ಹೆಚ್ಚುವರಿ ಉತ್ತರ ಪತ್ರಿಕೆಗಳು (Additional Answer Booklet) ದಾಸ್ತಾನು ತೆಗೆದುಕೊಂಡ ದಿನಾಂಕದ ನಂತರ ಮುಖ್ಯ ಉತ್ತರ ಪತ್ರಿಕೆಯ ಪುಟಗಳ ಸಂಖ್ಯೆಯನ್ನು 28 ಪುಟಗಳಿಂದ 32 ಪುಟಗಳಿಗೆ ಬದಲಾವಣೆಯಾದ ಹಿನ್ನಲೆಯಲ್ಲಿ ಪರೀಕ್ಷೆಗೆ ಬಳಕೆಯಾಗದೇ ಉಗ್ರಾಣ ವಿಭಾಗದ ದಾಸ್ತಾನಿನಲ್ಲಿ ಉಳಿದಿರುತ್ತವೆ. ಈ ಸಂಬಂಧ ಸಭಾ ಸದಸ್ಯರುಗಳು ಚರ್ಚಿಸಲಾಗಿದ್ದು, ಪಲ್ಪ್‌ನ ಇ-ಹರಾಜಿನಲ್ಲಿ ಹರಾಜು ಮಾಡದೇ, ಬದಲಿಯಾಗಿ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ 2017 ರ ನವೆಂಬರ್/ಡಿಸೆಂಬರ್ ಪರೀಕ್ಷೆಯ ಪ್ರಾಯೋಗಿಕ ಉತ್ತರ ಪತ್ರಿಕೆಗಳಿಗೆ ಬಳಕೆ ಮಾಡುವಂತೆ ಸುತ್ತೋಲೆ ಹೊರಡಿಸಿ,ಬೇಡಿಕೆ ಪತ್ರ ಪಡೆದು ಮುಂದಿನ ಪರೀಕ್ಷಾ ಲೇಖನ ಸಾಮಾಗ್ರಿಗಳ ಜೊತೆಗೆ ಬೇಡಿಕೆಗನುಗುಣವಾಗಿ ಸಂಸ್ಥೆಗಳಿಗೆ ನೀಡಲು ಸಭೆಯಲ್ಲಿ ನಿರ್ಣಹಿಸಲಾಗಿದೆ.

ಪ್ರಯುಕ್ತ, ಪ್ರಸ್ತುತ ಪರೀಕ್ಷಾ ಪದ್ಧತಿಯಲ್ಲಿ ವಿದ್ಯಾರ್ಥಿಗಳು 32 ಪುಟಗಳ ಥಿಯರಿ ಉತ್ತರ ಪತ್ರಿಕೆಗಳನ್ನು ಪೂರ್ತಿಯಾಗಿ ಬಳಸದಿರುವ ಹಿನ್ನೆಲೆಯಲ್ಲಿ, ತಾಂತ್ರಿಕ ಪರೀಕ್ಷಾ ಮಂಡಳಿಯ ಉಗ್ರಾಣದ ದಾಸ್ತಾನಿನಲ್ಲಿರುವ ಹೆಚ್ಚುವರಿ ಉತ್ತರ ಪತ್ರಿಕೆ (Additional Answer Booklet) ಗಳನ್ನು ಪ್ರಸಕ್ತ ಪರೀಕ್ಷಾ ಪದ್ಧತಿಯಲ್ಲಿನ ಪ್ರಾಯೋಗಿಕ ಪರೀಕ್ಷೆಗೆ ಅಥವಾ ಇತರೆ ಕಛೇರಿ ಕೆಲಸಗಳಿಗೆ ಉಪಯೋಗಿಸುವ ಸಲುವಾಗಿ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇತರೆ ಸಂಸ್ಥೆಗಳ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಗೆ ಬೇಕಾಗಿರುವ 2017 ನೇ ನವೆಂಬರ್/ಡಿಸೆಂಬರ್ ಡಿಪ್ಲೊಮೋ ಸೆಮಿಸ್ಟರ್ ಪರೀಕ್ಷೆಯ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿ ಸಲ್ಲಿಸುವಾಗ, ಹೆಚ್ಚುವರಿ ಉತ್ತರ ಪತ್ರಿಕೆ (Additional Answer Booklet) ಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿ ಪಡೆದುಕೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

**ಇವರಿಗೆ,**

ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್,ಕಿರಿಯ ತಾಂತ್ರಿಕ ಶಾಲೆ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ:-ಮಾಹಿತಿಗಾಗಿ**

1. ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ ಹಿರಿಯ ತಾಂತ್ರಿಕ ಸಹಾಯಕರು/ ರಿಜಿಸ್ಟ್ರಾರ್ [ಪರೀಕ್ಷೆ]
2. ಇ- ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.